# ಬ್ರೌಸಿಂಗ್ ಕ್ಷೇತ್ರಕ್ಕೂ ಕಾಲಿಟ್ಟ ಜಿಯೊ



ಸ್ವದೇಶಿ ಸೂತ್ರಕ್ಕೆ ಅನುಗುಣವಾಗಿ 'ಜಿಯೊ' ಹೊಸ ಬ್ರೌಸರ್ ಬಿಡುಗಡೆ ಮಾಡಿದೆ. ಬಳಕೆದಾರರ ಮಾಹಿತಿಯ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡುವ ಈ ಬ್ರೌಸರ್, ಭಾರತೀಯ ಭಾಷೆಗಳನ್ನೂ ಅಳವಡಿಸಿಕೊಂಡಿದೆ

■ ಶಶಿಕುಮಾರ್ ಸಿ.

ಮಾಹಿತಿ ಸುರಕ್ಷತೆಯ ಮೇಲೆ ಹೆಚ್ಚಿನ ಗಮನಹರಿಸುವ ಹಾಗೂ ಬಳಕೆದಾರರಿಗೆ ತಮ್ಮ ಮಾಹಿತಿಯ ಸಂಪೂರ್ಣ ನಿಯಂತ್ರಣದ ಅವಕಾಶವನ್ನು ಕಲ್ಪಿಸುವಂತಹ ಸ್ವದೇಶಿ ನಿರ್ಮಿತ ಬ್ರೌಸರ್‌ನ ಕೊರತೆ ದೇಶಕ್ಕಿತ್ತು. ಆ ಕೊರತೆಯನ್ನು ರಿಲಯನ್ಸ್ ಟೆಲಿಕಾಂ ಸಂಸ್ಥೆಯು ನೀಗಿಸಿದ್ದು, 'ಮೇಡ್ ಇನ್ ಇಂಡಿಯಾ ಬ್ರೌಸರ್' (ಜಿಯೊ ಬ್ರೌಸರ್) ಅನ್ನು ಈಚೆಗೆ ಬಿಡುಗಡೆ ಮಾಡಿದೆ.

ಗೂಗಲ್‌ನ 'ಕ್ರೋಮ್' ಸೇರಿದಂತೆ ಇತರೆ ಬ್ರೌಸರ್‌ಗಳಿಗೆ ಹೋಲಿಸಿದ್ದಲ್ಲಿ 'ಜಿಯೊ ಬ್ರೌಸರ್' ಸಹ ಉತ್ತಮ ಕಾರ್ಯಕ್ಷಮತೆಯನ್ನು ಹೊಂದಿದೆ. ಅತ್ಯುನ್ನತವಾದ ಕ್ರೋಮಿಯಂ ಬ್ಲಿಂಕ್ ಎಂಜಿನ್‌ನಿಂದ ನಿರ್ಮಿಸಲಾಗಿರುವ ಈ ಬ್ರೌಸರ್, ವೇಗವಾಗಿ ಕಾರ್ಯನಿರ್ವಹಿಸುತ್ತದೆ. ವೇಗವಾದ ಎಂಜಿನ್‌ನಿಂದಾಗಿ ಇದು ವೆಬ್ ಪುಟಗಳನ್ನು ಅತ್ಯಂತ ವೇಗವಾಗಿ ತೆರೆಯಲು ಸಹಾಯ ಮಾಡುತ್ತದೆ. ಉತ್ತಮ ಸಾಮರ್ಥ್ಯದ ಮೀಡಿಯಾ ಸ್ಟ್ರೀಮಿಂಗ್ ಮತ್ತು ಎಮೋಜಿ ಡೊಮೇನ್ ಸಪೋರ್ಟ್ ಮಾಡುವುದರ ಜೊತೆಗೆ ಇದು ಎನ್‌ಕ್ರಿಪ್ಟ್ ಕನೆಕ್ಷನ್ ಅನ್ನೂ ಹೊಂದಿದೆ. ಇದರಿಂದಾಗಿ ಮೌಲ್ಯವರ್ಧಿತ ಬ್ರೌಸಿಂಗ್ ಅನುಭವ ಬಳಕೆದಾರರಿಗೆ ಲಭ್ಯವಾಗಲಿದೆ.

ಕನ್ನಡ, ಹಿಂದಿ, ಮರಾಠಿ, ತಮಿಳು, ಗುಜರಾತಿ, ತೆಲುಗು, ಮಲಯಾಳಿ ಹಾಗೂ ಬೆಂಗಾಲಿ ಭಾಷೆಗಳಲ್ಲಿ ಇದು ಬಳಕೆಗೆ ಲಭ್ಯವಿದ್ದು, ಇದರಿಂದಾಗಿ ಪ್ರಾದೇಶಿಕ ಭಾಷಾ ಬೆಂಬಲಕ್ಕೆ ಕೈಜೋಡಿಸಿದೆ. ಇದರ ಪರಿಕಲ್ಪನೆ ಮತ್ತು ವಿನ್ಯಾಸವು ಸಂಪೂರ್ಣವಾಗಿ ಭಾರತದ್ದೇ ಆಗಿದ್ದು, ಜಿಯೋ ಪೇಜ್‌ಗಳ ಸಾಂಪ್ರದಾಯಿಕ ಬ್ರೌಸಿಂಗ್ ಅನುಭವವನ್ನು ಮೀರಿ ಹೆಚ್ಚಿನದನ್ನು ನೀಡುತ್ತದೆ. ಗೂಗಲ್ ಪ್ಲೇಸ್ಟೋರ್‌ನಲ್ಲಿ ಈ ಬ್ರೌಸರ್ ಅನ್ನು ಮೊದಲು ಡೌನ್‌ಲೋಡ್ ಮಾಡಿಕೊಂಡು ಲಾಗಿನ್ ಆಗಬೇಕು. ■

## ಜಿಯೊ ಬ್ರೌಸರ್‌ನ ವಿಶೇಷತೆಗಳು

- ಭಾಷೆ, ವಿಷಯ ಮತ್ತು ಪ್ರದೇಶಗಳ ವಿಚಾರದಲ್ಲಿ ಬಳಕೆದಾರರ ಆದ್ಯತೆಗೆ ತಕ್ಕಂತೆ ಕಂಟೆಂಟ್ ಫೀಡ್ ಅನ್ನು ಕಸ್ಟಮೈಸ್ ಮಾಡಲಾಗಿದೆ. ಇದರ ಜೊತೆಗೆ, ಜಿಯೊ ಪೇಜಸ್ ಬಳಕೆದಾರರಿಗೆ ಮುಖ್ಯವಾದ ಅಥವಾ ಆಸಕ್ತಿಯ ವಿಷಯಗಳಲ್ಲಿ ಮಾತ್ರ ಅಧಿಸೂಚನೆಗಳನ್ನು(ನೋಟಿಫಿಕೇಷನ್) ಕಳುಹಿಸುತ್ತದೆ. ಹಿಂದಿ, ಮರಾಠಿ, ತಮಿಳು, ಗುಜರಾತಿ, ತೆಲುಗು, ಮಲಯಾಳಂ, ಕನ್ನಡ ಮತ್ತು ಬಂಗಾಳಿ ಭಾಷೆಗಳಲ್ಲಿ ಲಭ್ಯವಿರುವ ಈ ಬ್ರೌಸರ್‌ನಲ್ಲಿ ಬಳಕೆದಾರರು ತಮ್ಮ ಆದ್ಯತೆಗೆ ಅನುಗುಣವಾಗಿ ವಿಷಯ ಫೀಡ್ ಮಾಡುವ ಕಸ್ಟಮೈಸ್ ಆಯ್ಕೆಯನ್ನು ಹೊಂದಿರುತ್ತಾರೆ. ಉದಾಹರಣೆಗೆ ಭಾಷೆ ಅಥವಾ ರಾಜ್ಯವನ್ನು ಇದರಲ್ಲಿ ಆಯ್ಕೆ ಮಾಡಿಕೊಂಡ ಬಳಿಕ ಆ ರಾಜ್ಯದ ಜನಪ್ರಿಯ ತಾಣಗಳು ಪರದೆಯ ಮೇಲೆ ಕಾಣಿಸಿಕೊಳ್ಳತೊಡಗುತ್ತವೆ.
- ತನ್ನಲ್ಲಿನ ಬ್ರೌಸಿಂಗ್ ಅನುಭವವನ್ನು ವರ್ಣಮಯವಾಗಿ ಕಟ್ಟಿಕೊಡುವ ಸಲುವಾಗಿಯೇ ಜಿಯೊ ಬ್ರೌಸರ್‌ನಲ್ಲಿ ಬ್ಯಾಕ್‌ಗ್ರೌಂಡ್ ಥೀಮ್ ಆಯ್ಕೆಯನ್ನು ನೀಡಲಾಗಿದೆ. ಇದರಿಂದ ಬಳಕೆದಾರರು ತಮಗೆ ಬೇಕಾದಂತಹ ಕಲರ್‌ಫುಲ್ ಥೀಮ್‌ಗಳನ್ನು ಸೆಟ್ ಮಾಡಿಕೊಳ್ಳಬಹುದು. ಜೊತೆಗೆ ಡಾರ್ಕ್ ಮೋಡ್ ಆಯ್ಕೆಯನ್ನೂ ನೀಡಲಾಗಿದೆ.
- ಪ್ರಮುಖ ಸರ್ಚ್ ಇಂಜಿನ್‌ಗಳಾದ ಗೂಗಲ್, ಬಿಂಗ್, ಎಂಎಸ್‌ಎನ್, ಯಾಹೂ ಮತ್ತು ಡಕ್ ಡಕ್ ಗೋ ಬ್ರೌಸರ್‌ಗಳನ್ನು ತಮ್ಮ ಡೀಫಾಲ್ಟ್ ಸರ್ಚ್ ಎಂಜಿನ್ ಆಗಿಸುವ ಆಯ್ಕೆಯನ್ನು ಇದರಲ್ಲಿ ನೀಡಲಾಗಿದೆ. ತ್ವರಿತ ಮತ್ತು ಸುಲಭ ಪ್ರವೇಶಕ್ಕಾಗಿ ಹೋಮ್‌ಸ್ಕ್ರೀನ್‌ನಲ್ಲಿ ನೆಚ್ಚಿನ ವೆಬ್‌ಸೈಟ್‌ಗಳ ಲಿಂಕ್‌ಗಳನ್ನು ಪಿನ್ ಮಾಡುವ ಅವಕಾಶವನ್ನು ಕಲ್ಪಿಸಲಾಗಿದೆ.
- ಫೈಲ್ ಪ್ರಕಾರಕ್ಕೆ ಅನುಗುಣವಾಗಿ ಬ್ರೌಸರ್ ಸ್ವಯಂಚಾಲಿತವಾಗಿ ಡೌನ್‌ಲೋಡ್‌ಗಳನ್ನು ವರ್ಗೀಕರಿಸುತ್ತದೆ. ಅಂದರೆ ಚಿತ್ರ, ವಿಡಿಯೊ, ಡಾಕ್ಯುಮೆಂಟ್ ಅಥವಾ ಪುಟಗಳು. ಇದರಿಂದಾಗಿ ಫೈಲ್ ನಿರ್ವಹಣೆಯನ್ನು ಸುಲಭಗೊಳಿಸುತ್ತದೆ. ಅದಕ್ಕಾಗಿ ಪ್ರತ್ಯೇಕ ಡೌನ್‌ಲೋಡ್ ಮ್ಯಾನೇಜರ್ ಆಯ್ಕೆಯನ್ನು ಒದಗಿಸಲಾಗಿದೆ.
- ಒಂದು ನಿರ್ದಿಷ್ಟ ಕಾರ್ಡ್‌ನ ಪ್ರಮುಖ ಸಂಖ್ಯೆಗಳು, ಪ್ರವೃತ್ತಿಗಳು, ಚಿಹ್ನೆಗಳು ಅಥವಾ ಮುಖ್ಯಾಂಶಗಳನ್ನು ಈ ಬ್ರೌಸರ್‌ನಲ್ಲಿನ ಮಾಹಿತಿ ಕಾರ್ಡ್ ಸೆರೆ ಹಿಡಿಯುತ್ತದೆ. ಉದಾ: ಸ್ಟಾಕ್ ಮಾರುಕಟ್ಟೆ ಪ್ರವೃತ್ತಿಗಳು, ಸರಕುಗಳ ಬೆಲೆಗಳು ಅಥವಾ ಕ್ರಿಕೆಟ್ ಸ್ಕೋರ್, ಮತ್ತು ಅವುಗಳನ್ನು ಪರದೆಯ ಮೇಲೆ ಕಾಂಪ್ಯಾಕ್ಟ್ ಕ್ಲಿಕ್ ಮಾಡಬಹುದಾದ ಬ್ಯಾನರ್‌ಗಳಾಗಿ ಪ್ರದರ್ಶಿಸುತ್ತದೆ.
- ಇನ್‌ಕಾಗ್ನಿಟೋ ಮೋಡ್ ಬ್ರೌಸಿಂಗ್ ಇತಿಹಾಸವನ್ನು ವ್ಯವಸ್ಥೆಯಲ್ಲಿ ಸಂಗ್ರಹಿಸುವುದನ್ನು ತಡೆಯುವ ಮೂಲಕ ಖಾಸಗಿ ಬ್ರೌಸಿಂಗ್ ಅನ್ನು ಸಕ್ರಿಯಗೊಳಿಸುತ್ತದೆ. ಜಿಯೊ ಪೇಜ್‌ಗಳಲ್ಲಿ, ಅಜ್ಞಾತ ಮೋಡ್‌ಗೆ ಪ್ರವೇಶ ಸಂಕೇತವಾಗಿ ಬಳಕೆದಾರರು ನಾಲ್ಕು ಅಂಕಿಯ ಭದ್ರತಾ ಪಿನ್ ಅಥವಾ ಫಿಂಗರ್‌ಪ್ರಿಂಟ್ ಆಯ್ಕೆಯನ್ನು ಹೊಂದಿರುತ್ತಾರೆ.
- ಬಳಕೆದಾರರಿಗೆ ತಡೆರಹಿತ ಬ್ರೌಸಿಂಗ್ ಅನುಭವವನ್ನು ಒದಗಿಸುವ ಸಲುವಾಗಿ ಬ್ರೌಸರ್ ಅಪೇಕ್ಷಿಸದ ಜಾಹೀರಾತುಗಳು ಮತ್ತು ಪಾಪ್‌ಅಪ್‌ಗಳನ್ನು ನಿರ್ಬಂಧಿಸಲಾಗಿದೆ.

